

ಊಟೋಪಚಾರದ ನಂತರ ಊರ ಕಟ್ಟೆ ಅವರ ಪಟ್ಟಾಂಗದ ತಾಣವಾಗಿತ್ತು. ಊರಿಗಾಗಿ ಸ್ಮರಣೀಯ ಕೆಲಸ ಏನಾದರೂ ಮಾಡಬೇಕು ಎನ್ನುವ ಚರ್ಚೆ ಒಂದು ದಿನ ಮಾತಿನ ನಡುವೆ ಬಂತು. ಆಗ ಹೊಳೆದದ್ದು ಕೆರೆಯ ಅಭಿವೃದ್ಧಿ. ಅದು ದೃಢವಾಗಿ ಅನುಷ್ಠಾನ ಆಗಿದ್ದರ ಪರಿಣಾಮ ಈಗ ಗೋಚರಿಸುತ್ತಿದೆ.

## ಕಾನೂನಿನಲ್ಲಿ ಅವಕಾಶ ಇಲ್ಲ

ಉಜ್ಜಯಿನಿ ಮೂಲದ ನೌಕರರು, ಪರವೂರಿನಲ್ಲಿ ನೆಲೆಸಿದ್ದ ಉದ್ಯೋಗಸ್ಥರು ಮತ್ತು ಕಾಲೇಜು ವಿದ್ಯಾರ್ಥಿಗಳ ಗುಂಪು ಗ್ರಾಮಪಂಚಾಯಿತಿಗೆ ಭೇಟಿ ನೀಡಿತು. ಉದ್ಯೋಗ ಖಾತ್ರಿ ಯೋಜನೆಯನ್ನೇ ಬಳಸಿಕೊಂಡು ಕೆರೆಯ ಪುನರುಜ್ಜೀವನ ಮಾಡುವ ಕನಸು ಆ ಗುಂಪಿನದಾಗಿತ್ತು. ಅದಕ್ಕೆ ಕಾನೂನನಲ್ಲಿ ಅವಕಾಶ ಇಲ್ಲ ಎಂಬ ಉತ್ತರ ಪಂಚಾಯಿತಿಯಿಂದ ಬಂತು. ಜಿಲ್ಲಾ ಪಂಚಾಯಿತಿ ಜೊತೆಯೂ ಸಮಾಲೋಚಿಸುವ ಬಗ್ಗೆ ಗ್ರಾಮಸ್ಥರು ಕೇಳಿದರು. ನಿಮ್ಮ ಕಾರ್ಮಿಕರ ಜೊತೆ ನಾವೂ ಶ್ರಮದಾನ ಮಾಡಿ ಕೆರೆಯನ್ನು ಚಂದಗೊಳಿಸುತ್ತೇವೆ. ಮಣ್ಣು ಕೆಲಸದ ಬದಲಾಗಿ ಪೊದೆ, ಮುಳ್ಳು ಗಿಡವನ್ನು ಕಡಿಸಿ ಒಪ್ಪ ಮಾಡುತ್ತೇವೆ. ಕೆರೆಯನ್ನು ಸುಸ್ಥಿತಿಗೆ ತರುತ್ತೇವೆ ಎಂಬ ಭರವಸೆಯನ್ನೂ ನೀಡಿದರು. ನರೇಗಾ ಯೋಜನೆಯಲ್ಲಿ ಮಣ್ಣಿನ ಕೆಲಸವನ್ನೇ ಮಾಡಬೇಕು. ಅದರ ನಿಯಮಾನುಸಾರ ಎರಡು ಅಡಿ ಆಳ, ಎರಡು ಅಡಿ ಅಗಲ, ನಾಲ್ಕು ಅಡಿ ಉದ್ದದ ಗುಂಡಿಯನ್ನು ತೆಗೆಯಬೇಕು ಎನ್ನುವ ಸೂಚನೆ ಸಿಕ್ಕಿತು.

ಗ್ರಾಮ ಪಂಚಾಯಿತಿಯ ಉದ್ಯೋಗ ಖಾತ್ರಿ ಕಾರ್ಮಿಕರನ್ನು ಬಳಸುವುದು ಸಾಧ್ಯ ಇಲ್ಲ ಎನ್ನುವುದು ಗೊತ್ತಾದ ಮೇಲೆ, ನಾಲ್ಕಾರು ಜನ ಒಂದು ದಿನ ಬೆಳಿಗ್ಗೆ ಪೂಜೆ ಮಾಡಿ ಕೆಲಸಕ್ಕೆ ಇಳಿದರು. ದಿಕ್ಪಾಪಾಲು ಚಾಚಿಕೊಂಡಿರುವ ಮುಳ್ಳುಕಂಟಿಗಳು ದೈಹಿಕ ಕಸರತ್ತಿಗೆ ಬಗ್ಗುವ ಸ್ಥಿತಿಯಲ್ಲಿ ಇಲ್ಲ ಎನ್ನುವುದು ಗೊತ್ತಾಯಿತು. ಗಿಡವನ್ನು ಕಡಿದರೆ, ಅದು ಮತ್ತೆ ಚಿಗಿತು ಹಬ್ಬುತ್ತದೆ. ನಿರ್ಮೂಲನೆ ಮಾಡಬೇಕು ಎಂದರೆ, ಬೇರು ಸಮೇತ ಕೀಳಬೇಕು. ಅಂದರೆ ಅದಕ್ಕೆ ಯಂತ್ರವೇ ಸೂಕ್ತ ಎಂದು ಅನ್ನಿಸಿತು. ಜೆಸಿಬಿಯವರನ್ನು ಕರೆಸಿ ಮಾತನಾಡಿದ್ದೂ ಆಯಿತು. ಹಣಕ್ಕೆ ಏನು ಮಾಡುವುದು? ಕೆಲಸಕ್ಕೆ ತೊಡಗಿದವರೇ ತಮ್ಮ ಶಕ್ತ್ಯಾನುಸಾರ ಐದು–ಹತ್ತು ಸಾವಿರ ರೂಪಾಯಿಯನ್ನು ಹೊಂದಿಸಿ, ಹಿಡಿದ ಕೆಲಸವನ್ನು ಬಿಡಬಾರದು ಎಂದು ಮುನ್ನುಗ್ಗಿದರು. ಐದಾರು ಜನರ ಸಂಕಲ್ಪದ ಕೆಲಸಕ್ಕೆ ನಂತರ ಊರಿಗೆ ಊರೇ ಕೈಜೋಡಿಸಿತು. ಗ್ರಾಮಸ್ಥರು ಶ್ರಮಿಕರಿಗೆ ಊಟ–ತಿಂಡಿಯ ವ್ಯವಸ್ಥೆ ಮಾಡಿದರು. ತಮಗೆ ಸಾಧ್ಯವಾದಷ್ಟು ಹಣವನ್ನೂ ನೀಡಿ ಹುರಿದುಂಬಿಸಿದರು. ಕೆಲಸ ಶುರುವಾಗಿ ಒಂಬತ್ತನೇ ದಿನ ರಾತ್ರಿ ಸುರಿದ ಮಳೆಯ ಪರಿಣಾಮ ಕೆರೆಯಲ್ಲಿ ನೀರು ತುಂಬಿತ್ತು.

## ಅನುದಾನದ ಸಹವಾಸ ಬೇಡ

ಊರ ಕೆಲಸಕ್ಕೆ ಉಜ್ಜಯಿನಿ ಸದ್ಧರ್ಮ ಪೀಠದ ಶ್ರೀಗಳ ಶ್ರೀರಕ್ಷೆಯೂ ಬೆನ್ನೆಲುಬಾಗಿತ್ತು. ನೌಕರರು–ವಿದ್ಯಾರ್ಥಿಗಳ ಕೆಲಸ ಪತ್ರಿಕೆಗಳು, ಸಾಮಾಜಿಕ ಮಾಧ್ಯಮಗಳ ಮೂಲಕ ಪ್ರಚಾರ ಪಡೆಯಿತು. ಕೆಲಸದ ಆರನೇ ದಿನ ಜಿಲ್ಲೆಯ ಸಂಸದರೂ ಕೆರೆಯಂಗಳಕ್ಕೆ ಬಂದಿದ್ದರು. ಶ್ರೀಗಳ ಸಮ್ಮುಖದಲ್ಲಿ ಗ್ರಾಮಸ್ಥರಿಗೆ ಭರವಸೆಯ ಮಾತನ್ನು ಆಡಿದರು. ಊರ ಅಭಿವೃದ್ಧಿಗೆ ಆರು ಕೋಟಿ ಯೋಜನೆಯನ್ನು ಪ್ರಸ್ತಾಪಿಸಿದರು. ಕೆಲಸದಲ್ಲಿ ತೊಡಗಿದ ಜನ ಆಗ ಕೆಲಸಕ್ಕೆ ಗಡುವು ನೀಡಿದರು. ‘ಸರ್ಕಾರದ ಕಡತದ ಹಿಂದೆ ಸುತ್ತಲು ನಮ್ಮಲ್ಲಿ ಯಾರೂ ಸ್ವಯಂ ಸೇವಕರಿಲ್ಲ; ನಾಯಕರೂ ಇಲ್ಲ. ಹೇಗೋ ನಮ್ಮ ಕೆಲಸ ನಾವು ಮಾಡಿಕೊಳ್ಳುತ್ತಿದ್ದೇವೆ. ನಮ್ಮ ಪಾಡಿಗೆ ನಮ್ಮನ್ನು ಬಿಡಿ. ನಂತರ ಬೇಕಾದರೆ ನಿಮ್ಮ ಯೋಜನೆಯನ್ನು ಜಾರಿಗೊಳಿಸಿ. ವೈಯಕ್ತಿಕವಾಗಿ ನಿಮಗೆ ಸಾಧ್ಯವಾದರೆ ಶ್ರೀಗಳ ಜೋಳಿಗೆಗೆ ತಿಳಿದಷ್ಟು ಹಾಕಿ. ಜೋಳಿಗೆಯಿಂದ ನಾವು ಪಡೆಯುತ್ತೇವೆ. ಜೋಳಿಗೆಗೆ ಕೆರೆಯನ್ನು ಕಟ್ಟುವ ತಾಕತ್ತು ಇದೆ’ ಎಂಬ ಮಾತು ಗುಂಪಿನಿಂದ ಕೇಳಿ ಬಂತು. ನಂತರ ಜಿಲ್ಲಾ ಪಂಚಾಯಿತಿ ಸದಸ್ಯ, ತಾಲ್ಲೂಕು ಪಂಚಾಯಿತಿ ಸದಸ್ಯರ ಭೇಟಿ ನೀಡಿದರು. ಅವರಿಗೂ ವೈಯಕ್ತಿಕವಾಗಿ ನೆರವು ನೀಡಿದರೆ ಸಾಕು ಎನ್ನುವ ಮನವಿಯನ್ನೇ ಮಾಡಲಾಗಿದೆ.

## ನೆರವಿಗೆ ಬಂದ ಫೇಸ್‌ಬುಕ್

ಫೇಸ್‌ಬುಕ್‌ನಂತಹ ಸಾಮಾಜಿಕ ಮಾಧ್ಯಮ ವಾದ–ವಿವಾದದ ತಾಣದಂತೆ ಕಾಣಿಸುತ್ತದೆ. ಅದು ವಂಚನೆ– ಪ್ರಚೋದನೆ ಕಾರಣಕ್ಕೆ ಆಗಾಗ ಸದ್ದು ಮಾಡುತ್ತದೆ. ಆದರೆ, ಅದಕ್ಕೆ ಸದ್ಬಳಕೆಯ ಆಯಾಮವೂ ಇದೆ. ಉಜ್ಜಯಿನಿಯ ಕೆರೆಯ ಕಾಯಕಲ್ಪದ ವಿಷಯವನ್ನು ಫೇಸ್‌ಬುಕ್ ಮೂಲಕ ತಿಳಿದ ಅನೇಕ ಹಿತೈಷಿಗಳು ತಮ್ಮ ಕೈಲಾದಷ್ಟು ನೆರವು ನೀಡಿದ್ದಾರೆ. ‘ನಮ್ಮ ಹೆಸರನ್ನು ಹೇಳಬೇಡಿ’ ಎಂದು ಹೇಳಿ ಹಣ ನೀಡಿದವರೂ ಇದ್ದಾರೆ.

ಊರಿನಲ್ಲಿ ಬಾವಿಯೊಂದು ಬಳಕೆಗೆ ಸಾಧ್ಯ ಇಲ್ಲದಂತೆ ಜಡವಾಗಿತ್ತು. ಗ್ರಾಮದ ಕಾಲೇಜು ಹುಡುಗರು ಬೆಳಿಗ್ಗೆ ತಿಂಡಿ ತಿಂದು ಕೆಲಸ ಶುರು ಮಾಡಿದವರು. ಮಧ್ಯಾಹ್ನದ ಹೊತ್ತಿಗೆ ಬಾವಿಯನ್ನು ಸ್ವಚ್ಛ ಮಾಡಿದ್ದರು.

## ಸಂಕಷ್ಟ ಲೆಕ್ಕಿಸಿದ ಗ್ರಾಮಸ್ಥರು

ಉಜ್ಜಯಿನಿಯ ‘ಗ್ರಾಮ ಸ್ವರಾಜ್ಯ ಪ್ರತಿಷ್ಠಾನ’ ಕೆರೆಯಲ್ಲಿ ನೀರು ನಿಲ್ಲಿಸಲು ಬೆವರು ಸುರಿಸಲು ಜುಲೈ 16ರಂದು ಶುರುವು ಮಾಡಿತು. ದೈಹಿಕ ಶ್ರಮ ಸಾಧ್ಯ ಇಲ್ಲ ಎನ್ನುವ ಅರಿವಾದ ನಂತರ ಯಂತ್ರಗಳ ಮೊರೆ ಹೋಗಲಾಯಿತು. ಮಳೆ ಬಂದು ಕೆರೆ ತುಂಬಿದ್ದರಿಂದ ಇನ್ನೂ ಒಂದಿಷ್ಟು ಕೆಲಸ ಬಾಕಿ ಉಳಿದಿದೆ. ಬೇಸಿಗೆಗೆ ಅದು ಪೂರ್ಣ ಆಗುತ್ತದೆ. ನಮ್ಮ ಈ ಕೆಲಸಕ್ಕೆ 15–20 ಲಕ್ಷ ರೂಪಾಯಿ ಖರ್ಚಾಗಬಹುದು ಎಂದು ಅಂದಾಜಿಸಿದ್ದೇವೆ. ಈ ಹಣವನ್ನು ಸಾರ್ವಜನಿಕರಿಂದಲೇ ಸಂಗ್ರಹಿಸುತ್ತೇವೆ. ಕೊರೊನಾ ಸಂದರ್ಭದಲ್ಲೂ ಕೂಲಿ ಕಾರ್ಮಿಕರೂ ಕೈ ಎತ್ತಿ ನಮ್ಮೂರ ಕೆರೆಯ ಅಭಿವೃದ್ಧಿಗೆ ಹಣ ನೀಡಿದ್ದಾರೆ. ಈ ರೀತಿಯ ನೆರವು ದೇಶದ ಎಲ್ಲ ಹಳ್ಳಿಯಲ್ಲಿಯೂ ಸಾಧ್ಯ ಎನ್ನುವ ಆಶಾಭಾವನೆಯನ್ನು ನಮ್ಮೂರು ಹುಟ್ಟಿಸಿದೆ ಎನ್ನುತ್ತಾರೆ ರೇವಯ್ಯ ಒಡೆಯರ್. ■